# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ಉಪನಗರ ಉಪವಿಭಾಗ, ಬೆಂಗಳೂರು.

ದಿನಾಂಕ:04-09-2021 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ:04 ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳ ಜೊತೆ ಯಲಹಂಕ ಉಪನಗರ ಉಪವಿಭಾಗ ಕಛೇರಿಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ.ಹೆಚ್.ಪಿ.ಸಚಿನ್ | ಸಹಾಯಕ ಕಾರ್ಯಪಾಲಕ ಅಭಿಯಂತರರು |
| 2 | ಶ್ರೀ.ಎನ್.ಡಿ.ಮೋಹನ್ | ಸಹಾಯಕ ಅಭಿಯಂತರರು |
| 3 | ಶ್ರೀ.ಆನಂದ್.ಎ. | ಸಹಾಯಕ ಅಭಿಯಂತರರು, ಬೆಸ್ಕಾಂ |
| 4 | ಶ್ರೀಮತಿ.ಬಿ.ಎನ್.ನೇತ್ರಾವತಿ | ಕಿರಿಯ ಆರೋಗ್ಯ ಪರಿವೀಕ್ಷಕರು |
| 5 | ಶ್ರೀ.ಹನುಮಂತಪ್ಪ ಪಾಟೀಲ್ | ಆರ್.ಎಫ್.ಓ |
| 6 | ಶ್ರೀ.ಬೆಟ್ಟಸ್ವಾಮಿ.ಎಸ್.ಜಿ | ಎ.ಇ.ಇ. ಯಲಹಂಕ ವಿಭಾಗ |
| 7 | ಶ್ರೀ.ಎ.ಎನ್.ಮಧುಸೂಧನ್ | ಎಲೆಕ್ಟ್ರಿಕಲ್ ಕಂಟ್ರಾಕ್ಟರ್ |
| 8 | ಶ್ರೀ.ಕೃತಿಕಾ.ಎಂ.ವಿ | ಸ.ಕಂ.ಅ |
| 9 | ಶ್ರೀಮತಿ.ಪಾವನನಾಗತಿ | ಎ.ಇ |
| 10 | ಶ್ರೀ.ಟಿ.ಕೆ.ಪುಟ್ಟಸ್ವಾಮಿ | ಮೆಂಬರ್, ವಾರ್ಡ್ ನಂ:04 |
| 11 | ಶ್ರೀ.ವಿಜಯಕುಮಾರ್.ಕೆ | ಜನರಲ್ ಸೆಕ್ರೇಟರಿ, ಸಿ.ಎಫ್.ಯಲಹಂಕ |
| 12 | ಶ್ರೀ.ಬಿ.ಆರ್.ಮೋಹನ್ | ಕಮಿಟಿ (ವಾರ್ಡ್) ಮೆಂಬರ್ |
| 13 | ಶ್ರೀ.ಆರ್.ಡಿ.ಪುಟ್ಟಸ್ವಾಮಿ | ವಾರ್ಡ್ ಕಮಿಟಿ ಮೆಂಬರ್ |
| 14 | ಶ್ರೀ.ಸಂಗಪ್ಪ.ಎಸ್ | ಕೆಂಪೇಗೌಡ ಪಾರ್ಕ್ |
| 15 | ಶ್ರೀ.ಗೌರಿಭಟ್ | ನಂ:02, ಶಿವನಿಲಯ, 4ನೇ ಬಿ ಕ್ರಾಸ್, 12ನೇ ಬಿ ಅಟ್ಟೂರು, ಯಲಹಂಕ |
| 16 | ಶ್ರೀ.ನರಸಿಂಹಕುಮಾರ್ | ಯಲಹಂಕ ಟಿ.ಆರ್.ಪಿ.ಎಸ್ |
| 17 | ಶ್ರೀ.ರಂಗೇಗೌಡ.ಕೆ.ಎನ್ | ಮಾರ್ಷಲ್, ವಾರ್ಡ್ |
| 18 | ಶ್ರೀ.ಪಿ.ಎಂ.ಮಲ್ಯಾದ್ರಿ | ಆರ್ಟಿಕಲ್ಚರ್ |
| 19 | ಶ್ರೀ.ಕೆ.ಜಿ.ಗೀತಾ | ಅನಿಮಲ್ ಹಜ್‌ಬೆಂಡರಿ |
| 20 | ಶ್ರೀಮತಿ.ಅನಿತಾ | ಅಸೆಸ್ಸರ್ |
| 21 | ಶ್ರೀ.ಪ್ರಸನ್ನಕುಮಾರ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್ |
| 22 | ಶ್ರೀ.ಬಿ.ಎಸ್.ಬೋರೇಗೌಡ | ಆರ್.ಡಬ್ಲ್ಯೂ.ಎಫ್, ಶಾರದಾನಗರ |

ಸಹಾಯಕ ಅಭಿಯಂತರರು ಆದ **ಶ್ರೀ.ಡಿ.ಎನ್.ಮೋಹನ್, ಸಹಾಯಕ ಅಭಿಯಂತರರು, ಯಲಹಂಕ ಉಪನಗರ ಉಪವಿಭಾಗ** ರವರು ಸಭೆಗೆ ಹಾಜರಿದ್ದು, ನೋಡಲ್ ಅಧಿಕಾರಿಗಳು ಹಾಗೂ ಭಾಗವಹಿಸಿದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲು ನೋಡಲ್ ಅಧಿಕಾರಿಯನ್ನು ಕೋರಿದರು.

ಶ್ರೀ.ಮನೋಜ್‌ಜೈನ್.ಐ.ಎ.ಎಸ್, ಮಾನ್ಯ ವಿಶೇಷ ಆಯುಕ್ತರು (ಯೋಜನೆ), ಬಿ.ಬಿ.ಎಂ.ಪಿ ಹಾಗೂ ಸಮಿತಿಯ ನೋಡಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ದಿನದ ಸಭೆಯಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ವಿವರಣೆ ಕೇಳಿದರು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮತೆಗೆದು ಕೊಳ್ಳಬೇಕಾಗಿರುವ ಅಧಿಕಾರಿ / ಇಲಾಖೆ |
|---|---|---|---|
| 1 | ಡಿ ಮಾರ್ಟ್ ಮುಂದೆ ಆಟೋ ನಿಲ್ದಾಣದಿಂದ ವಾಹನಗಳ ಓಡಾಟಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಆರ್.ಡಬ್ಲ್ಯು.ಎ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ಟ್ರಾಫಿಕ್ ಪೋಲೀಸ್ ರವರಿಗೆ ಆಟೋ ನಿಲ್ದಾಣವನ್ನು ಬೇರೆ ಸ್ಥಳದಲ್ಲಿ ನಿಲ್ಲಿಸಲು ಕ್ರಮಕೈಗೊಳ್ಳಲು ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ. | ಯಲಹಂಕ ನ್ಯೂ ಟೌನ್, |
| 2 | ವೈಟ್ ಟಾಪಿಂಗ್ ಕಾಮಗಾರಿ ಕೆಲಸಗಳನ್ನು ನಿಧಾನ ಗತಿಯಲ್ಲಿ ನಡೆಯುತ್ತಿರುವುದರಿಂದ ವಾಹನಗಳ ಓಡಾಟಕ್ಕೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ಇದಕ್ಕೆ ಸಂಬಂಧಪಟ್ಟ ಎ.ಇ, ಎ.ಇ.ಇ ರವರಿಗೆ ಅತೀ ಶೀಘ್ರದಲ್ಲಿ ಕಾಮಗಾರಿ ಕೆಲಸವನ್ನು ಪೂರ್ತಿಗೊಳಿಸಲು ಹಾಗೂ ಅವರಿಗೆ ನೀಡಿರುವ ಕಾಲಾವಕಾಶದೊಳಗೆ ಕಾಮಗಾರಿ ಕೆಲಸವನ್ನು ನಿರ್ವಹಿಸಲು ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ ಮತ್ತು ಕಾಂಟ್ರಾಕ್ಟ್ ಬಾಲು ರವರು ಮುಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ಹಾಜರಾಗಲು ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದ ಎ.ಇ., ಎ.ಇ.ಇ (ನಗರ ಯೋಜನೆ) ಸ.ಕಾ.ಅ, ಯ.ಉ.ಉ.ವಿ ಸಭೆಯನ್ನು ನಡೆಸಲು ಸೂಚಿಸಿರುತ್ತಾರೆ. | ಸ.ಕಾ.ಅ, ನಗರ ಯೋಜನೆ ಮತ್ತು ಯಲಹಂಕ ಉಪನಗರ ಉಪವಿಭಾಗ |
| 3 | ವಾರ್ಡ್ ನಂ:04 ರಲ್ಲಿ ಫುಟ್‌ಪಾತ್ ಮೇಲೆ ಅಂಗಡಿಗೆ ಸಂಬಂಧಿಸಿದ ಸಾಮಾನುಗಳನ್ನು ಅಂಗಡಿ ಮುಂದೆ ಹಾಗೂ ಪಾಟ್‌ಗಳಲ್ಲಿ (ಗಿಡ) ಇಟ್ಟುಕೊಂಡಿರುವುದರಿಂದ ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮಕೈಗೊಳ್ಳಲು ನೋಡಲ್ ಅಧಿಕಾರಿಯವರು ತಿಳಿಸಿರುತ್ತಾರೆ. | ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಕಿರಿಯ ಆರೋಗ್ಯ ಪರಿವೀಕ್ಷಕರು |
| 4 | ರಸ್ತೆಯಲ್ಲಿ ಹೆಗ್ಗಣ ಹಾಗೂ ಇನ್ನಿತರೆ ಪ್ರಾಣಿಗಳು ಸತ್ತು ಬಿದ್ದಿದ್ದರೆ ಅದನ್ನು ತೆಗೆಯುವುದಿಲ್ಲ ಎಂದು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ನೋಡಲ್ ಅಧಿಕಾರಿಯವರು ಪಶು ಸಂಗೋಪನೆ ಇಲಾಖೆಯವರೆ ಅದನ್ನು ಶುಚಿಗೊಳಿಸಬೇಕು ಅದಕ್ಕೆ ಸಂಬಂಧಪಟ್ಟ ಕಛೇರಿ ಆದೇಶ ಮುಂದಿನ ದಿನಗಳಲ್ಲಿ ನೀಡಲಾಗುವುದು ಎಂದು ತಿಳಿಸಿರುತ್ತಾರೆ. | ಪಶುಸಂಗೋಪನೆ ಡಾ॥ಲಕ್ಷ್ಮಿನಾರಾಯಣ್ |

| | | | |
|---|---|---|---|
| 5 | ಕಡಿದಿರುವ ಮರಗಳನ್ನು ಹಾಕಲು ಸರಿಯಾದ ಸ್ಥಳವಿಲ್ಲದೇ ಇರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ | ಕಡಿದ ಮರಗಳನ್ನು ತಹಸೀಲ್ದಾರ್ ಹಾಗೂ ಶಾಸಕರಿಗೆ ಗಮನಕ್ಕೆ ತಂದು ಲಭ್ಯವಿರುವ ಸರ್ಕಾರಿ ಜಾಗವನ್ನು ಗುರುತಿಸಿಕೊಡಲು ಕಂದಾಯ ಇಲಾಖೆಗೆ ತಿಳಿಸುವುದು. | ಅರಣ್ಯ ಇಲಾಖೆ, ಯಲಹಂಕ ಮತ್ತು ಸ.ಕಾ.ಅ, ಯ.ಉ.ಉ.ವಿ |

ಸೂಚನೆ:-ನೋಡಲ್ ಅಧಿಕಾರಿಗಳು ತಿಳಿಸಿರುವಂತೆ ಸಂಬಂಧಪಟ್ಟ ಇಲಾಖೆಯಿಂದ ಅನುಪಾಲನಾ

ವರದಿಯನ್ನು ನೀಡಲು ಸೂಚಿಸಿದೆ.

ಶ್ರೀ.ಎನ್.ಡಿ.ಮೋಹನ್
ಸಹಾಯಕ ಅಭಿಯಂತರರು ಹಾಗೂ
ಕಾರ್ಯದರ್ಶಿಗಳು, ವಾರ್ಡ್ ನಂ:04

ಶ್ರೀ.ಮನೋಜ್‌ಜೈನ್. ಐ.ಎ.ಎಸ್
ಮಾನ್ಯ ವಿಶೇಷ ಆಯುಕ್ತರು (ಯೋಜನೆ)
ಹಾಗೂ ನೋಡಲ್ ಅಧಿಕಾರಿಗಳು.

ಪ್ರತಿಯನ್ನು:-

1) ಮಾನ್ಯ ಜಂಟಿ ಆಯುಕ್ತರು ಬಿ.ಬಿ.ಎಂ.ಪಿ, ಯಲಹಂಕ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ / ಯೋಜನಾ ವಿಭಾಗ / ರಸ್ತೆ ಮೂಲಭೂತ ಸೌಕರ್ಯ / ಕೆರೆ ಅಭಿವೃದ್ಧಿ / ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಕೋಶ, ವಾರ್ಡ್ ನಂ:04 ರವರ ಮಾಹಿತಿಗಾಗಿ ಸಲ್ಲಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ / ಬಿ.ಬ್ಲ್ಯೂ.ಎಸ್.ಎಸ್.ಬಿ ಯಲಹಂಕ ಉಪನಗರ ರವರ ಸೂಕ್ತ ಕ್ರಮಕ್ಕಾಗಿ.
6) ಕಛೇರಿ ಕಡತಕ್ಕೆ.